


ಬಾಲವಿಜ್ಞಾನ
ಮೊದಲ ಸಂಚಿಕೆ






















## ಹೊಸ ಪ್ರಯೋಗಗಳು

ಸದ್ಯದಲ್ಲಿ ವಿಜ್ಞಾನ ಸಾಹಿತ್ಯವನ್ನು ಬೆಳೆಸುತ್ತಿರುವುದು ವಿಶ್ವವಿದ್ಯಾಲಯಗಳಿಗಿಂತ ಖಾಸಗಿ ಪ್ರಕಾಶನ ಸಂಸ್ಥೆಗಳೇ. 'ನವಕರ್ನಾಟಕ ಪ್ರಕಾಶನ ಸಂಸ್ಥೆ' ಪ್ರಕಟಿಸಿರುವ ಸುಮಾರು 5,600 ಕೃತಿಗಳಲ್ಲಿ 150ಕ್ಕೂ ಹೆಚ್ಚು ವಿಜ್ಞಾನ ಕೃತಿಗಳೇ ಇವೆ. ವಿಶ್ವಮಾನ್ಯರು, ಲೋಕಜ್ಞಾನ ಮಾಲೆ, ವಿಜ್ಞಾನಕೋಶಗಳು, ಜ್ಞಾನ ವಿಜ್ಞಾನ ಮಾಲೆ ಮುಂತಾದ ಶೀರ್ಷಿಕೆಗಳು ಓದುಗ ವಲಯವನ್ನು ಬಹುವಾಗಿ ಸೆಳೆದಿವೆ. ಈ ಸಂಸ್ಥೆ ನಾಲ್ಕು ಸಂಪುಟಗಳಲ್ಲಿ 1998ರಲ್ಲಿ ಪ್ರಕಟಿಸಿದ 'ಜ್ಞಾನ ವಿಜ್ಞಾನ ಕೋಶ' ಈವರೆಗೆ 20 ಸಾವಿರ ಸೆಟ್ ಮಾರಾಟವಾಗಿರುವುದು ಒಂದು ದಾಖಲೆಯೇ ಸರಿ. ಇತ್ತೀಚೆಗೆ ಹೊರಬಂದ 'ವಿಜ್ಞಾನದ ಹದ್ದಾರಿಯಲ್ಲಿ ಮಹಾತಿರುವು' ವಿಜ್ಞಾನ ಚರಿತ್ರೆಯನ್ನು ಹೇಗೆ ಅರ್ಥಮಾಡಿಕೊಳ್ಳಬೇಕು ಎಂಬುದಕ್ಕೆ ಅತ್ಯುತ್ತಮ ಉದಾಹರಣೆಯಾಗಿದೆ.




ಇದಕ್ಕೆ ಕೊಡುಗೆ ಕೊಟ್ಟವರೆಲ್ಲರೂ ಆಯಾ ಕ್ಷೇತ್ರದ ಪರಿಣತರೇ. ಓದುಗರಿಗೆ, ವಿಶೇಷವಾಗಿ ಅನುವಾದಕರಿಗೆ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ನಿಘಂಟಿನ ಜೊತೆಗೆ ವಿಜ್ಞಾನ ತಂತ್ರಜ್ಞಾನ ಅಕಾಡೆಮಿಯ ವಿಜ್ಞಾನ ನಿಘಂಟೂ ಇದೆ, ಹಾಗೆಯೇ ನವಕರ್ನಾಟಕ ಸಂಸ್ಥೆಯ 'ವಿಜ್ಞಾನ ತಂತ್ರಜ್ಞಾನ ಪದಸಂಪದ' ಅನುವಾದಕರಿಗೆ ಮೆಚ್ಚಿನ ಪರಾಮರ್ಶನ ಕೃತಿ.

ನಾಡಿನ ಪ್ರಸಿದ್ಧ ಪುಸ್ತಕ ಪ್ರಕಟಣೆಯ ಸಂಸ್ಥೆಯಾದ 'ಸಪ್ನಾ ಬುಕ್ ಹೌಸ್', 'ದಿವ್ಯದರ್ಶನ ಮಾಲೆ' ಮತ್ತು 'ಜ್ಞಾನ ದೀಪ ಮಾಲೆ'ಯಲ್ಲಿ ಹಲವು ವಿಜ್ಞಾನ ಕೃತಿಗಳನ್ನು ತಂದಿದೆ. ಜೀವನ ಚರಿತ್ರೆ ಬರೆಯುವುದು ಶುದ್ಧ ವಿಜ್ಞಾನ ಬರೆಯುವುದಕ್ಕಿಂತ ಹೆಚ್ಚು ಆಕರ್ಷಕ ಎನ್ನುತ್ತಿದೆ. 'ಇಂಡಿಯನ್ ಬುಕ್ ಹೌಸ್' ಒಂದು ಕಾಲಕ್ಕೆ ವಿಜ್ಞಾನ ಕೃತಿಗಳ ಪ್ರಕಟಣೆಗೆ ಹೆಸರಾಗಿತ್ತು. ಮತ್ತೆ ಆ ವೈಭವಕ್ಕೆ ಬರಲು ಪ್ರಯತ್ನಿಸುತ್ತಿದೆ. 'ವಸಂತ ಪ್ರಕಾಶನ' ಮಕ್ಕಳ ಸಾಹಿತ್ಯಕ್ಕೆ, ವಿಶೇಷವಾಗಿ ಮಕ್ಕಳ ವಿಜ್ಞಾನಕೋಶಕ್ಕೆ ಹೆಚ್ಚು ಒತ್ತುಕೊಟ್ಟಿದೆ. ಸಾಹಿತ್ಯ ಪರಿಷತ್ತು ಆಗೊಮ್ಮೆ ಈಗೊಮ್ಮೆ ವಿಜ್ಞಾನವನ್ನು ನೆನಪಿಸಿಕೊಳ್ಳುವುದುಂಟು. ಅದರ ಶತಮಾನೋತ್ಸವ ಆಚರಣೆಯ ಸಂದರ್ಭದಲ್ಲಿ 'ಆಧುನಿಕ ಸಾಹಿತ್ಯ ಚರಿತ್ರೆ' ಕುರಿತಂತೆ ಹದಿನಾಲ್ಕು ಸಂಪುಟಗಳನ್ನು ತರುವ ಯೋಜನೆಯಲ್ಲಿ ಮೊದಲು ಪ್ರಕಟವಾದದ್ದೇ 14ನೇ ಸಂಪುಟ ವಿಜ್ಞಾನ ತಂತ್ರಜ್ಞಾನ ಸಂಪುಟ. 'ನ್ಯಾಷನಲ್ ಬುಕ್ ಟ್ರಸ್ಟ್' ಕನ್ನಡದಲ್ಲಿ ಅನೇಕ ವಿಜ್ಞಾನ ಕೃತಿಗಳನ್ನು, ವಿಶೇಷವಾಗಿ ಜೀವನಚರಿತ್ರೆಗಳನ್ನು ಹೊರತಂದಿದೆ. ಇವೆಲ್ಲ ಅನುವಾದ ರೂಪದಲ್ಲಿವೆ.

ಅಧ್ಯಯನದ ಒಂದು ಭಾಗವಾಗಿ ವಿಜ್ಞಾನ ಕಾಣಿಸಿಕೊಂಡದ್ದು ಪಠ್ಯಪುಸ್ತಕಗಳ ಮೂಲಕವೇ. ಈಗಲೂ ಅದರ ಸ್ಥಾನ ಉಳಿಸಿಕೊಂಡಿದೆ. ಕನ್ನಡ ಮಾಧ್ಯಮದ ಪ್ರಶ್ನೆ ಬಂದಾಗ ಒಂದು ಅಪೂರ್ವ ಸಂಗತಿಯನ್ನು ನೆನಪಿಸಿಕೊಳ್ಳಬೇಕು. 1969ರಲ್ಲಿ